**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಎನ್. ರವಿಕುಮಾರ್, ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ, ಶ್ರೀ ವೈ. ಎಂ. ಸತೀಶ್, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ರಘುನಾಥ್ ರಾವ್ ಮಲ್ಕಾಪೂರೆ, ಹಾಗೂ ಇತರರು ನಿಯಮ 330ರ ಮೇರೆಗೆ ಮಂಡಿಸಿರುವ ಸೂಚನೆಗೆ ಉತ್ತರ.**

**ವಿಷಯ:** ರಾಜ್ಯದ ಅರಣ್ಯ ಇಲಾಖೆಯಲ್ಲಿ ಮಾವುತರು ಮತ್ತು ಕಾವಾಡಿಗರು 'ಗ್ರೂಪ್ ಡಿ' ಆಧಾರದ ಮೇಲೆ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ಆನೆ ಶಿಬಿರಗಳಲ್ಲಿ, ಅರಣ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕಾವಾಡಿಗರಿಗೆ ಮತ್ತು ಮಾವುತರಿಗೆ ಸರಿಯಾದ ಸಮಯಕ್ಕೆ ಸಂಬಳವಾಗುತ್ತಿಲ್ಲದಿರುವುದು ವಿಷಾದನೀಯ. ಸದರಿಯವರಿಗೆ ಹಾಗೂ ಅವರ ಕುಟುಂಬ ವರ್ಗಕ್ಕೂ ಕೂಡ ಕನಿಷ್ಟ ಮೂಲಭೂತ ಸೌಲಭ್ಯಗಳಿಲ್ಲದೇ ಜೀವನ ನಡೆಸುತ್ತಿರುವುದು ದುಃಖಕರ ಸಂಗತಿ. ಅಲ್ಲದೇ ಅವರ ಮಕ್ಕಳು ಕೂಡ ಶಿಕ್ಷಣದಿಂದ ವಂಚಿತರಾಗುತ್ತಿರುವುದು ದೌರ್ಭಾಗ್ಯವೇ ಸರಿ. ಅನೇಕ ಬಾರಿ ಪುಂಡಾನೆಗಳ, ಕಾಡಾನೆಗಳ ಹಾವಳಿ ತಡೆಗಟ್ಟುವ ಸಂದರ್ಭದಲ್ಲಿ ಅನೇಕ ಕಾವಾಡಿಗರು, ಮಾವುತರು ಅಸು ನೀಗಿರುವ ಘಟನೆಗಳು ನಡೆದು ಹಾಗೂ ಗಂಭೀರ ಗಾಯಗಳಾಗಿ ಕೈ-ಕಾಲು ಮುರಿದು ಅನೇಕ ಜನರು ಅಂಗವಿಕಲರಾಗಿರುವ ಉದಾಹರಣೆಗಳಿವೆ. ಹೀಗಾದಾಗ, ಸದರಿಯವರುಗಳಿಗೆ ಯಾವುದೇ ರೀತಿಯ ಪರಿಹಾರ ಧನವು ದೊರಕದೇ ಇರುವುದು ದುರದೃಷ್ಟಕರ ಸಂಗತಿ. ಆದ್ದರಿಂದ, ಸರ್ಕಾರ ಕಾವಾಡಿಗರಿಗೆ ಮತ್ತು ಮಾವುತರಿಗೆ ಸಂಬಳ ಹಾಗೂ ಮೂಲಭೂತ ಸೌಲಭ್ಯ, ಶಿಕ್ಷಣ ಒದಗಿಸುವ ಸಂಬಂಧ ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿರುವ ಬಗ್ಗೆ.

********

**ಉತ್ತರ:** ರಾಜ್ಯದ ಆನೆ ಶಿಬಿರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರ ಗುತ್ತಿಗೆ ಆಧಾರದ ಆನೆ ಕಾವಾಡಿಗ ಮತ್ತು ಮಾವುತರುಗಳಿಗೆ ನಿಗದಿತ ಸಮಯಕ್ಕೆ ನಿಯಮಾನುಸಾರ ಸಂಬಳ ನೀಡಲಾಗುತ್ತಿರುತ್ತದೆ. ಸರಿಯಾದ ಸಮಯಕ್ಕೆ ವೇತನ ಪಾವತಿಯಾಗದೇ ಇರುವ ಬಗ್ಗೆ ಯಾವುದೇ ಮನವಿ/ದೂರುಗಳು ಸ್ವೀಕೃತವಾಗಿರುವುದಿಲ್ಲ. ಅಲ್ಲದೇ, ಮಾವುತ ಮತ್ತು ಕಾವಾಡಿಗರ ಸಿಬ್ಬಂದಿಗಳಿಗೆ ಸರ್ಕಾರವು ವೇತನವನ್ನು ಹೆಚ್ಚಿಸಿದ್ದು ಅದರನ್ವಯ ಕಾಲಕಾಲಕ್ಕೆ ಸದರಿಯವರಿಗೆ ವೇತನ ಪಾವತಿಸಲಾಗುತ್ತಿದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:FD 20 SRP 2016 ದಿನಾಂಕ:04.05.2016ರ ಪ್ರಕಾರ ಮಂಜೂರಾದಂತೆ ವನ್ಯಜೀವಿ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ವಿಶೇಷ ಭತ್ಯೆಯನ್ನು ಪಾವತಿಸಲಾಗುತ್ತಿದೆ ಹಾಗೂ ಗುತ್ತಿಗೆ/ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾವುತ ಮತ್ತು ಕಾವಾಡಿಗರಿಗೆ ಗುಂಪು ವಿಮಾ ಯೋಜನೆ, ಇಎಸ್ಐ ಮತ್ತು ಇಪಿಎಫ್ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

Behardh

1. **ರಾಜ್ಯದಲ್ಲಿ ಆನೆ ಜಮೇದಾರ, ಆನೆ ಮಾವುತ ಮತ್ತು ಆನೆ ಕಾವಾಡಿಗ ವೃಂದಗಳಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಹುದ್ದೆಗಳು**:

| ವೃಂದದ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|
| ಆನೆ ಜಮೇದಾರ | 8 | 3 | 5 |
| ಆನೆ ಮಾವುತ | 122 | 57 | 65 |
| ಆನೆ ಕಾವಾಡಿಗ | 122 | 81 | 41 |

**ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ:**

**ಆನೆ ಜಮೇದಾರ:** ಈ ವೃಂದದಲ್ಲಿನ ಎಲ್ಲಾ ಹುದ್ದೆಗಳನ್ನು ಪೂರ್ಣವಾಗಿ ಮುಂಬಡ್ತಿ ಮೂಲಕ ಮಾತ್ರ ಭರ್ತಿ ಮಾಡಬೇಕಾಗಿದ್ದು, ವಿವಿಧ ವೃತ್ತಗಳಲ್ಲಿನ ಆನೆ ಮಾವುತ ವೃಂದದ ಜೇಷ್ಠತಾ ಪಟ್ಟಿಯನ್ನು ಆಯಾ ವೃತ್ತದಲ್ಲಿ ಸಿದ್ಧಪಡಿಸಿ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹತೆಯನ್ನ ಪರಿಶೀಲಿಸಿ, ಅರ್ಹರಿರುವ ಆನೆ ಮಾವುತರಿಗೆ ಮುಂಬಡ್ತಿ ನೀಡುವ ಕ್ರಮ ಕೈಗೊಳ್ಳಲಾಗುವುದು.

**ಆನೆ ಮಾವುತ:** ಈ ವೃಂದದಲ್ಲಿನ ಎಲ್ಲಾ ಹುದ್ದೆಗಳನ್ನು ಪೂರ್ಣವಾಗಿ ಮುಂಬಡ್ತಿ ಮೂಲಕ ಮಾತ್ರ ಭರ್ತಿ ಮಾಡಬೇಕಾಗಿದ್ದು, ವಿವಿಧ ವೃತ್ತಗಳಲ್ಲಿನ ಆನೆ ಕಾವಾಡಿ ವೃಂದದ ಜೇಷ್ಠತಾ ಪಟ್ಟಿಯನ್ನು ಆಯಾ ವೃತ್ತದಲ್ಲಿ ಸಿದ್ಧಪಡಿಸಿ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹತೆಯನ್ನ ಪರಿಶೀಲಿಸಿ, ಅರ್ಹರಿರುವ ಆನೆ ಕಾವಾಡಿಗರಿಗೆ ಮುಂಬಡ್ತಿ ನೀಡುವ ಕ್ರಮ ಕೈಗೊಳ್ಳಲಾಗುವುದು.

**ಆನೆ ಕಾವಾಡಿಗ:** ಖಾಲಿ ಇರುವ ಹುದ್ದೆಗಳ ಪೈಕಿ ಸರ್ಕಾರದ ಪತ್ರ ಸಂಖ್ಯೆ: ಅಪಜೀ 228 ಅಅಸೇ 2021 ದಿನಾಂಕ: 16.08.2022ರಲ್ಲಿ 19 ಆನೆ ಕಾವಾಡಿಗ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ಅದರನ್ವಯ, ಸದರಿ 19 ಆನೆ ಕಾವಾಡಿಗ ಹುದ್ದೆಗಳು ಹಾಗೂ ಈ ಹಿಂದಿನ ಹಿಂಬಾಕಿ (backlog) ಉಳಿದ 3 ಹುದ್ದೆಗಳು ಸೇರಿದಂತೆ, ಒಟ್ಟು 22 [19+3 ಹಿಂಬಾಕಿ] ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಂತೆ ನೇರ ನೇಮಕಾತಿಗಾಗಿ ವೃತ್ತ (ಚಾಮರಾಜನಗರ, ಮೈಸೂರು, ಕೊಡಗು, ಕೆನರಾ ಮತ್ತು ಶಿವಮೊಗ್ಗ) ಮಟ್ಟದಲ್ಲಿ ದಿನಾಂಕ: 15.03.2023ರಂದು ಅಧಿಸೂಚನೆಗಳನ್ನು ಹೊರಡಿಸಿ, 16 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಉಳಿದ 6 ಹುದ್ದೆಗಳಿಗೆ ಆಯಾ ಆಯ್ಕೆ ಪ್ರಾಧಿಕಾರಿಗಳು ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿರ್ದೇಶನ ನೀಡಲಾಗುವುದು.

2. **ಆನೆ ಜಮೇದಾರ, ಆನೆ ಮಾವುತ ಮತ್ತು ಆನೆ ಕಾವಾಡಿಗ ವೃಂದಗಳಲ್ಲಿನ ಸಿಬ್ಬಂದಿಗಳ ವೇತನವನ್ನು ಮೇಲ್ದರ್ಜೆಗೇರಿಸಲು** ಇಲಾಖೆಯು 7ನೇ ರಾಜ್ಯ ವೇತನ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ ಹಾಗೂ ದಿನಾಂಕ:05.09.2023ರಂದು ನಡೆದ 7ನೇ ರಾಜ್ಯ ವೇತನ ಆಯೋಗದ ಸಭೆಯಲ್ಲಿ ಮಂಡಿಸಲಾಗಿರುತ್ತದೆ.

ಮುಂದುವರೆದು, ಆನೆ ಮಾವುತ ಮತ್ತು ಕಾವಾಡಿಗರ ಸಿಬ್ಬಂದಿಗಳಿಗೆ ವಾಸಕ್ಕಾಗಿ ಲಭ್ಯತೆಗೆ ಅನುಗುಣವಾಗಿ ಇಲಾಖಾ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗುತ್ತಿರುತ್ತದೆ. ಅಲ್ಲದೇ, ಆನೆ ಬಿಡಾರದ ಮಾವುತ ಹಾಗೂ ಕಾವಾಡಿಗರು ತಮ್ಮ ಕುಟುಂಬ ವರ್ಗದವರೊಂದಿಗೆ ಹತ್ತಿರದ ಗ್ರಾಮದಲ್ಲಿ ವಾಸವಿದ್ದು ಯಾವುದೇ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದಿಲ್ಲ.

ಮುಂದುವರೆದು, ಆನೆ ಶಿಬಿರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆನೆ ಕಾವಾಡಿಗ, ಆನೆ ಮಾವುತರ ಮಕ್ಕಳು ಹತ್ತಿರದ ಸರ್ಕಾರಿ, ಖಾಸಗಿ ಹಾಗೂ ಆಶ್ರಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಯಾವುದೇ ಆನೆ ಶಿಬಿರಗಳ ಆನೆ ಮಾವುತ ಮತ್ತು ಕಾವಾಡಿಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಕಾಡಾನೆ ಹಾವಳಿ ತಡೆಗಟ್ಟುವ ಸಂದರ್ಭದಲ್ಲಿ ಆನೆ ಕಾವಾಡಿಗ ಮತ್ತು ಆನೆ ಮಾವುತರು ಅಸುನೀಗಿರುವ ಹಾಗೂ ಕೈ-ಕಾಲು ಮುರಿದುಕೊಂಡಿರುವ ಯಾವುದೇ ಘಟನೆಗಳು ವರದಿಯಾಗಿರುವುದಿಲ್ಲ.

**ಸಂಖ್ಯೆ: ಎಫ್‌ಇಇ 243 ಎಫ್‌ಎನ್‌ಜಿ 2023**

(**ಈಶ್ವರ ಬಿ. ಖಂಡ್ರೆ**)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು